| District :Mysore | State : Karnataka |
|---|---|

Department of Social Forestry

# ಪೂರಕ ಟಿಪ್ಪಣಿ

ಮೈಸೂರು ಸಾಮಾಜಿಕ ಅರಣ್ಯ ವಿಭಾಗವು 1986-87 ನೇ ಸಾಲಿನಲ್ಲಿ ಪ್ರಾರಂಭವಾಗಿದ್ದು, ಪ್ರಸಕ್ತ ಸಾಲಿಗೆ 20 ವರ್ಷವಾಗುತ್ತಿದ್ದು, ಸಾಮಾಜಿಕ ಅರಣ್ಯೀಕರಣಕ್ಕೆ ಮಾತ್ರ ಒಳಪಟ್ಟು ಅದಕ್ಕನುಗುಣವಾಗಿ ಕಾರ್ಯ ನಿರ್ವಹಿಸುತ್ತಿದೆ. ಈ ವಿಭಾಗದ ಕಾರ್ಯವ್ಯಾಪ್ತಿಯಲ್ಲಿನ 7 ತಾಲ್ಲೂಕುಗಳಲ್ಲಿ ಸಾಮಾಜಿಕ ಅರಣ್ಯ ವಲಯಗಳು ಕಾರ್ಯನಿರ್ವಹಿಸುತ್ತಿವೆ ಹಾಗೂ ಶಾಶ್ವತ ಸಸ್ಯಕ್ಷೇತ್ರಗಳಿವೆ.

ಈ ವಿಭಾಗದ ವ್ಯಾಪ್ತಿಯಲ್ಲಿ ಒಟ್ಟು 80 ಮಂಜೂರಾದ ಹುದ್ದೆಗಳಿದ್ದು, ಆ ಪೈಕಿ ಹಾಲಿ 77 ಮಂದಿ ಅಧಿಕಾರಿಗಳು/ ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿದ್ದಾರೆ. ಇವರುಗಳ ವೇತನಭತ್ಯೆ ಮತ್ತು ಆಡಳಿತಾತ್ಮಕ ವೆಚ್ಚಗಳಿಗಾಗಿ ರೂ.82.87ಲಕ್ಷ ಅನುದಾನ ಬಿಡುಗಡೆಯಾಗಿದ್ದು, ಈಗಾಗಲೇ ರೂ.73.00 ಲಕ್ಷ ವೆಚ್ಚವಾಗಿದೆ.

************

**ಮೈಸೂರು ಸಾಮಾಜಿಕ ಅರಣ್ಯ ವಿಭಾಗವು ಈ ಕೆಳಕಂಡ ಯೋಜನೆಗಳಡಿ ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.**

1. **ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿ ವೈವಿಧ್ಯ ಸಂರಕ್ಷಣೆ ಯೋಜನೆ (ರಾಜ್ಯವಲಯ)** :- ಕರ್ನಾಟಕ ಸರ್ಕಾರ, ಅರಣ್ಯ ಇಲಾಖೆ ಮತ್ತು ಜಪಾನ್ ದೇಶದ ಸಹಯೋಗದೊಂದಿಗೆ ಅರಣ್ಯ ಇಲಾಖೆಯಲ್ಲಿ 2005-06 ನೇ ಸಾಲಿನಿಂದ 2012 -13 ನೇ ಸಾಲಿನವರೆಗೆ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿವೈವಿಧ್ಯ ಸಂರಕ್ಷಣೆ ಯೋಜನೆಯ ಚಟುವಟಿಕೆ ನಡೆಸಲು ಸರ್ಕಾರಿ ಆದೇಶವಾಗಿದ್ದು, ಅದರಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ಕರ್ನಾಟಕ ಸ್ವಸ್ಥಿರ ಅರಣ್ಯ ನಿರ್ವಹಣೆ ಮತ್ತು ಜೀವಿವೈವಿಧ್ಯ ಸಂರಕ್ಷಣೆ ಯೋಜನೆಯ 2ನೇ ಹಂತದ ಯೋಜನೆಯನ್ನು ಅನುಷ್ಟಾನಗೊಳಿಸಲು ಕ್ರಮ ಕೈಗೊಳ್ಳಲಾಗಿರುತ್ತದೆ. ಮೈಸೂರು ಸಾಮಾಜಿಕ ಅರಣ್ಯ ವಿಭಾಗವು ಎ ಯೋಜನೆಯಡಿ ಒಳಪಟ್ಟಿದ್ದು, ಈ ಶೀರ್ಷಿಕೆಯಡಿ 2006-07 ನೇ ಸಾಲಿಗೆ ಇದುವರೆವಿಗೂ ರೂ.7.542 ಲಕ್ಷ ಹಣ ಬಿಡುಗಡೆಯಾಗಿದ್ದು, ರೂ.7.484 ಲಕ್ಷ ಹಣ ವೆಚ್ಚವಾಗಿರುತ್ತದೆ. ಹಾಗೂ **ಈ ಕೆಳಕಂಡ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.**

- **ಮಾದರಿ - 6 - ಶಾಲಾವನ-10 ಹೆ** :- ಶಾಲೆಗಳಲ್ಲಿ ಸಸಿಗಳನ್ನು ಬೆಳೆಸುವ ಉದ್ದೇಶದಿಂದ ಶಾಲಾ ವಿದ್ಯಾರ್ಥಿಗಳನ್ನು ಈ ಒಂದು ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಸಲುವಾಗಿ ಮೈಸೂರು ತಾಲ್ಲೂಕಿನ ನವೋದಯ ಶಾಲೆಯಲ್ಲಿ ಶಾಲಾವನ ಬೆಳೆಸಲಾಗಿದೆ.

- <u>ಮಾದರಿ -8 (ಎ) ಪ್ರಾತ್ಯಕ್ಷಿಕೆ ಪ್ಲಾಟ' ನಿರ್ಮಾಣ 10 ಹೆ :</u> ರೈತರಲ್ಲಿ ಪರಿಸರ ಸಂರಕ್ಷಣೆ, ಭೂಜಲಗಳ ಸಂರಕ್ಷಣೆ ಮತ್ತು ಕೃಷಿ ಅರಣ್ಯ ಮಹತ್ವದ ಬಗ್ಗೆ ಅರಿವು ಮೂಡಿಸಲು ಸಹಾಯಕವಾಗುವುದು. ಯಶಸ್ವಿ ಪ್ರಾತ್ಯಕ್ಷಿಕೆ ಪ್ಲಾಟ್‌ಗಳು ಬೇರೆ ರೈತರಿಗೂ ಒಂದು ಜೀವಂತ ಉದಾಹರಣೆಯಾಗಿ ಅವರು ಸಹ ಅರಣ್ಯ ಇಲಾಖೆಯಿಂದ ಅವಶ್ಯಕ ಸಸಿಗಳನ್ನು ಹಾಗೂ ಕೃಷಿ ಅರಣ್ಯ ಕಾರ್ಯಕ್ರಮದ ಅನುಷ್ಠಾನ ತಂತ್ರಜ್ಞಾನವನ್ನು ಪಡೆದು ತಮ್ಮ ಜಮೀನಿನಲ್ಲಿ ವೃಕ್ಷ ಆಧಾರಿತ ಕೃಷಿ ಪದ್ಧತಿಯನ್ನು ಅಳವಡಿಸಿಕೊಳ್ಳಲು ಪ್ರೇರೆಪಿಸಬಹುದಾಗಿದೆ. ರೈತರಿಗೆ ಬಹುಪಯೋಗಿ ಹಾಗೂ ಆರ್ಥಿಕ ಸ್ವಾವಲಂಬನೆ ಪಡೆಯಲು ಅನುವಾಗುವಂತೆ ಬಹುಬೇಗ ಬೆಳೆಯುವ ನೀಲಗಿರಿ, ಸಿಲ್ವರ'ಓಕ್, ಗಾಳಿ, ಬೊಂಬು, ಸಾಗುವಾನಿ, ಹಾಗೂ ಹಣ್ಣು-ಹಂಪಲು ವೃಕ್ಷಗಳಾದ ಹುಣಸೆ, ನೆಲ್ಲಿ, ಹಲಸು, ಹಾಗೂ ಇತರೆ ತೋಟಗಾರಿಕೆ ಗಿಡಗಳನ್ನು ಬೆಳೆಸಲು ಕ್ರಮ ಕೈಗೊಳ್ಳಲಾಗುವುದು.

  **ಈ ವರ್ಷ ಹುಣಸೂರು ಸಾಮಾಜಿಕ ಅರಣ್ಯ ವಲಯದ ಮಾದಹಳ್ಳಿ ಮಠದಲ್ಲಿ ಪ್ರಾತಕ್ಷಿಕೆ ಪ್ಲಾಟ್ ನಿರ್ಮಾಣ ಮಾಡಲಾಗಿದೆ.**

- <u>ಸಸಿಗಳ ಉತ್ಪಾದನೆ</u>

  ಮಾದರಿ 8 (ಸಿ) – 8 x 12 – 0.04 ಲಕ್ಷ

  ಮಾದರಿ 8 (ಡಿ) – 4 x 6 – 1.50 ಲಕ್ಷ

ಸಸಿಗಳನ್ನು 2006-07 ನೇ ಸಾಲಿಗೆ ಉತ್ಪಾದಿಸಿ, ಮುಂದಿನ ವರ್ಷದಲ್ಲಿ ಶಾಲಾ-ಕಾಲೇಜುಗಳಿಗೆ, ಸಂಘ-ಸಂಸ್ಥೆಗಳಿಗೆ, ಸಾರ್ವಜನಿಕರಿಗೆ, ರೈತರಿಗೆ, ಸಸಿಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗುವುದು.

- <u>ಸಸಿಗಳ ಪೋಷಣೆ:-</u> 5 x 8 ಅಳತೆಯ 2.53 ಲಕ್ಷ ಮತ್ತು 8 x 12 ಅಳತೆಯ 0.049 ಲಕ್ಷ ಸಸಿಗಳನ್ನು ಇದುವರೆವಿಗೂ ವಿತರಿಸಿದ್ದು, ರೂ.4.513 ಲಕ್ಷ ಸರ್ಕಾರಕ್ಕೆ ಆದಾಯ ಬಂದಿರುತ್ತದೆ.

- <u>ಅರಣ್ಯ ಪ್ರೇರಕರ ಗೌರವಧನ :–</u> ಈ ವಿಭಾಗದ ವ್ಯಾಪ್ತಿಯಲ್ಲಿ 39 ಮಂದಿ ಅರಣ್ಯ ಪ್ರೇರಕರುಗಳಿದ್ದು, ಅವರಿಂದ ಸಸಿಗಳ ಬೇಡಿಕೆ ಸಮೀಕ್ಷೆ ಮತ್ತು ಸಸಿಗಳ ವಿತರಣೆ ಇತ್ಯಾದಿ ಕೆಲಸಗಳನ್ನು ಮಾಡಿಸಲಾಗುತ್ತಿದೆ. ಪ್ರತಿ ಮಾಹೆಗೆ ರೂ.1000/- ದಂತೆ ಗೌರವಧನ ಪಾವತಿಸಲಾಗುತ್ತಿದೆ.

1. <u>2406-01-102-2-11 - ಸಾಮಾಜಿಕ ಅರಣ್ಯೀಕರಣ (ಜಿಲ್ಲಾವಲಯ) :</u> ಈ ಶೀರ್ಷಿಕೆಯಡಿ **ಕಾಮಗಾರಿಗಾಗಿ ರೂ.17.32 ಲಕ್ಷ** ಹಣ ಬಿಡುಗಡೆಯಾಗಿದ್ದು ಈ ಕೆಳಕಂಡ ಕಾಮಗಾರಿಗಳಿಗಾಗಿ **ರೂ.13.74 ಲಕ್ಷ** ಹಣ ಖರ್ಚಾಗಿದೆ.

- <u>ಕಿರು ಅರಣ್ಯ ಉತ್ಪನ್ನ</u> :- ಈ ಶೀರ್ಷಿಕೆಯಡಿ 90.5 ಹೆ ನೆಡುತೋಪು ಪೋಷಣೆ ಮತ್ತು 20 ಹೆ ಮುಂಗಡ ಕಾಮಗಾರಿ ಹಾಗೂ ಸಸಿಗಳ ಉತ್ಪಾಧನೆ, ಇನ್ನಿರತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

- **ಶಾಲಾನರ್ಸರಿ**:- 5 x 8 ಅಳತೆಯ 2.00 ಲಕ್ಷ ಸಸಿಗಳ ಪೋಷಣೆ ಸಂಬಂಧ ಇದುವರೆವಿಗೂ 1.436 ಲಕ್ಷ ಸಸಿಗಳನ್ನು ವಿತರಿಸಲಾಗಿದೆ. ಇದರಿಂದ ರೂ.20424/- ಆದಾಯ ಸರ್ಕಾರಕ್ಕೆ ಬಂದಿರುತ್ತದೆ. ಮತ್ತು ಮುಂದಿನ ವರ್ಷದಲ್ಲಿ ವಿತರಿಸುವ ಸಲುವಾಗಿ 2.00 ಲಕ್ಷ ಸಸಿಗಳ ಉತ್ಪಾದನೆಯನ್ನು ಈ ವರ್ಷ ಕೈಗೊಳ್ಳಲಾಗಿದೆ.

2. **32-ವನಸಂವರ್ಧನಾ ಯೋಜನೆ ;** ಇದೊಂದು ಗ್ರಾಮಪಂಚಾಯತ್ ಕಾರ್ಯಕ್ರಮವಾಗಿದ್ದು ರೂ.3.81 ಲಕ್ಷ ಆರ್ಥಿಕ ಗುರಿ ಇದೆ. ಈ ಶೀರ್ಷಿಕೆಯಡಿ 5x8 ಅಳತೆಯ 0.95 ಲಕ್ಷ ಸಸಿಗಳ ಪೋಷಣೆ ಮತ್ತು 1.80 ಲಕ್ಷ ಸಸಿಗಳ ಉತ್ಪಾದನೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದುವರೆವಿಗೂ 71000 ಸಸಿಗಳನ್ನು ವಿತರಿಸಿದೆ. ರೂ.18449/- ಆದಾಯ ಬಂದಿದೆ.

3. **ಎಸ್.ಜಿ.ಆರ್.ವೈ--ಜಿಲ್ಲಾ ಪಂಚಾಯತ್ ಶೀರ್ಷಿಕೆ :** ಇದೊಂದು ಸ್ಥಳೀಯ ಕೂಲಿಕಾರ್ಮಿಕರಿಗೆ ಉದ್ಯೋಗ ಒದಗಿಸುವ ಯೋಜನೆಯಾಗಿದ್ದು, ಪ್ರತಿ ಕೂಲಿಗಾರರಿಗೆ ದಿನಕ್ಕೆ 3 ಕೆ.ಜಿ. ಆಹಾರಧಾನ್ಯ ಮತ್ತು ರೂ.50.25 ನಗದು (ರೂ.69/- ದಿನಕ್ಕೆ) ರೂಪದಲ್ಲಿ ಕೂಲಿ ಪಾವತಿಸಲು ಅವಕಾಶವಿದೆ. ಸದರಿ ಶೀರ್ಷಿಕೆಯಡಿ ಇದುವರೆವಿಗೂ ರೂ.19.47 ಲಕ್ಷ ಹಣ ಮತ್ತು 921 ಕ್ವಿಂ ಆಹಾರಧಾನ್ಯ ಬಿಡುಗಡೆಯಾಗಿದ್ದು, ಪೂರ್ಣ ಹಣ ಮತ್ತು ಆಹಾರಧಾನ್ಯ ಖರ್ಚಾಗಿದೆ. ಈ ಶೀರ್ಷಿಕೆಯಲ್ಲಿ 99 ಹೆ ನೆಡುತೋಪು ಪೋಷಣೆ, 65 ಹೆ ಮಾನ್‌ಸೂನ್ ನೆಡುತೋಪು ಬೆಳೆಸಿದ್ದು, ಇನ್ನಿತರ ನರ್ಸರಿ ಅಭಿವೃದ್ಧಿ ಕಾರ್ಯಕ್ರಮಗಳನ್ನು 2006-07ನೇ ಸಾಲಿನಲ್ಲಿ ಹಮ್ಮಿಕೊಳ್ಳಲಾಗಿದೆ.

4. **ಗಿರಿಜನ ಉಪಯೋಜನೆ :** ಒಟ್ಟು 20 ಫಲಾನುಭವಿಗಳಿಗೆ ಬೊಂಬು ಮತ್ತು ಮನೆ ಬಾಗಿಲು ಕಿಟಕಿಗಳ ಸಾಮಾಗ್ರಿಯನ್ನು, ಹೆಂಚುಗಳನ್ನು ಸರಬರಾಜು ಮಾಡುವುದಕ್ಕಾಗಿ ರೂ.0.82 ಲಕ್ಷ ಅನುದಾನ ಸಂಬಂಧಿಸಿದ ತಾಲ್ಲೂಕುಗಳಿಗೆ ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ ಇಲಾಖೆಯಿಂದ ನೇರವಾಗಿ ಬಿಡುಗಡೆಯಾಗಿರುತ್ತದೆ. ಈಗಾಗಲೇ ಫಲಾನುಭವಿಗಳನ್ನು ಗುರುತಿಸಲಾಗಿದ್ದು ಹೆಚ್.ಡಿ.ಕೋಟೆ ತಾಲ್ಲೂಕಿನಲ್ಲಿ ಹೆಂಚುಗಳನ್ನು (5 ಫಲಾನುಭವಿಗಳಿಗೆ) ಸರಬರಾಜು ಮಾಡುವ ಬಗ್ಗೆ ರೂ.22000/- ಮೊತ್ತಕ್ಕೆ ಬಿಲ್ಲು ತಯಾರಿಸಿರುತ್ತದೆ. ಆದರೆ ಇತ್ತೀಚೆಗೆ ಮಾನ್ಯ ಮೈಸೂರು ಜಿಲ್ಲಾಧಿಕಾರಿಗಳು ಸಭೆಯಲ್ಲಿ ಸೂಚಿಸಿರುವ ಮೇರೆಗೆ ಫಲಾನುಭವಿಗಳಿಗೆ **ಸಾಮಾಜಿಕ ಭದ್ರತಾ ನೆಡುತೋಪನ್ನು** ಬೆಳೆಸಿಕೊಡುವ ಬಗ್ಗೆ ಕ್ರಮ ಕೈಗೊಳ್ಳಲಾಗುತ್ತಿದೆ.

5. **ಸಸಿಗಳ ವಿತರಣೆ ಮತ್ತು ಆದಾಯ :** 2006-07 ನೇ ಸಾಲಿಗೆ ವಿವಿಧ ಶೀರ್ಷಿಕೆಗಳಡಿ **ಒಟ್ಟು 4.725** ಲಕ್ಷ ಸಸಿಗಳನ್ನು ವಿತರಿಸಿದ್ದು ಇದರಿಂದ ಸರ್ಕಾರಕ್ಕೆ **ರೂ.4.902 ಲಕ್ಷ** ಆದಾಯ ಬಂದಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಸಾಮಾಜಿಕ ಅರಣ್ಯ ವಿಭಾಗ,
ಮೈಸೂರು.

## 2006-07ನೇ ಸಾಲಿನಲ್ಲಿ ವಿವಿಧ ಯೋಜನಾ ಕಾರ್ಯಕ್ರಮಗಳಡಿಯಲ್ಲಿ ಆರ್ಥಿಕ ಮತ್ತು ಭೌತಿಕ ವಿವರಗಳು- ಫೆಬ್ರವರಿ-2007

ವಿಭಾಗ: ಸಾಮಾಜಿಕ ಅರಣ್ಯ ಮೈಸೂರು

| ಕ್ರ.ಸಂ | ಯೋಜನೆ / ಲೆಕ್ಕ ಶೀರ್ಷಿಕೆ | ಹಂಚಿಕೆಯಾದ ಅನುದಾನ | ಬಿಡುಗಡೆಯಾದ ಅನುದಾನ | ಖರ್ಚು |
|---|---|---|---|---|
| 1 | 2406-01-102-2-81 ಕೆ.ಎಸ್.ಎಫ್.ಎಂ.ಬಿ.ಸಿ-139 ಕಾಮಗಾರಿಗಳು (ರಾಜ್ಯ ವಲಯ)<br>ಶಾಲಾವನ ಬೆಳೆಸುವುದು -10 ಹೆಕ್ಟೇರ್<br>ಪ್ರಾತ್ಯಕ್ಷಿತೆ ಪ್ಲಾಟ್ ನಿರ್ಮಾಣ-10 ಹೆಕ್ಟೇರ್<br>ಸಸಿಗಳ ಉತ್ಪಾಧನೆ & ನಿರ್ವಹಣೆ ಹಾಗೂ ಅರಣ್ಯ ಪ್ರೇರಕರ ಗೌರವಧನ ಇತ್ಯಾಧಿ | 11.689 | 7.542 | 7.484 |
| 2 | 2406-01-102-2-11-ಸಾಮಾಜಿಕ ಅರಣ್ಯೀಕರಣ (ಜಿಲ್ಲಾ ವಲಯ) | | | |
| ಅ | ಸಿಬ್ಬಂದಿ ವೇತನ & ಆಡಳಿತಾತ್ಮಕ ವೆಚ್ಚಗಳು | 78.00 | 82.87 | 73.00 |
| ಆ | ಕಿರು ಅರಣ್ಯ ಉತ್ಪನ್ನ - ಕಾಮಗಾರಿಗಳು<br>ನೆಡುತೋಪು ಪೋಷಣೆ -90.5 ಹೆಕ್ಟೇರ್<br>ಮುಂಗಡ ಕಾಮಗಾರಿ -20 ಹೆಕ್ಟೇರ್ | 11.82 | 11.82 | 9.41 |

| | | | | |
|---|---|---|---|---|
| | ಸಸಿಗಳ ಉತ್ಪಾಧನೆ & ನಿರ್ವಹಣ ಹಾಗೂ ಇತ್ಯಾಧಿ | | | |
| ಇ | ಶಾಲಾ ನರ್ಸರಿ : ಸಸಿಗಳ ಉತ್ಪಾಧನೆ & ಪೋಷಣೆ | 5.00 | 5.00 | 4.33 |
| ಈ | ಕಟ್ಟಡಗಳ ನಿರ್ವಹಣೆ | 0.50 | 0.50 | - |
| | ಒಟ್ಟು: (ಆ ಯಿಂದ ಈ) | 17.32 | 17.32 | 13.74 |
| 3 | ಎಸ್.ಜಿ.ಆರ್.ವೈ-ಜಿಲ್ಲಾ ಪಂಚಾಯತ್<br><br>ನೆಡುತೋಪು ಪೋಷಣೆ -99 ಹೆಕ್ಟೇರ್<br>ಮಾನ್ಸೂನ್ ನೆಡುತೋಪು ಬೆಳೆಸುವುದು - 65 ಹೆಕ್ಟೇರ್<br>ಕೃಷಿಹೊಂಡಗಳ ನಿರ್ವಹಣೆ, ನರ್ಸರಿ ಅಭಿವೃದ್ದಿ ಕೆಲಸ, ಸಸಿಗಳ ಪೋಷಣೆ ಇತ್ಯಾಧಿ | 32.00 | 19.47 & 921 ಕ್ವಿ.ಆಹಾರಧಾನ್ಯ | 19.47 & 921 ಕ್ವಿ.ಆಹಾರಧಾನ್ಯ |
| 4 | 2406-01-102-2-32 ವನಸಂವರ್ಧನಾ ಯೋಜನೆ-139 ಕಾಮಗಾರಿಗಳು: (ಗ್ರಾಮ ಪಂಚಾಯತ್ ವಲಯ)<br><br>ಸಸಿಗಳ ಉತ್ಪಾಧನೆ & ಪೋಷಣೆ | 3.81 | 2.85 | 0.56 |

ಟಿಪ್ಪಣಿ: ಮೇಲ್ಕಂಡ ಶಿರ್ಷಿಕೆಗಳಡಿ 2006-07ನೇ ಸಾಲಿಗೆ ಒಟ್ಟು 4.725 ಲಕ್ಷ ಸಸಿಗಳನ್ನು ಸಾರ್ವಜನಿಕರಿಗೆ, ಶಾಲಾ ಸಂಘಸಂಸ್ಥೆಗಳಿಗೆ, ರೈತಾಪಿಗಳಿಗೆ, ಇತ್ಯಾಧಿ ವಿತರಿಸಿದ್ದು ಇದರಿಂದ ಸರ್ಕಾರಕ್ಕೆ ರೂ.4.902 ಲಕ್ಷ ಆಧಾಯ ಬಂದಿರುತ್ತದೆ.

ಉಪ ಅರಣ್ಯ ಸಂರಕ್ಷಣಾಧಿಕಾರಿ,

ಸಾಮಾಜಿಕ ಅರಣ್ಯ ವಿಭಾಗ,

ಮೈಸೂರು.